# ರಾಜ್ಯದಲ್ಲಿ ಕೊಕ್ಕೊ ಬೆಳೆಸುವ ಕನಸು

ಬಿಕಾಂ ಮುಗಿಸಿ ಭಾರತೀಯ ಅಂಚೆ ಇಲಾಖೆಯಲ್ಲಿ ಪೋಸ್ಟ್‌ಮನ್ ಆಗಿ ಕೆಲಸ ಮಾಡುತ್ತಿದ್ದೇನೆ. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಡಿ. ಮಲ್ಲಿಗೆರೆ ನಮ್ಮ ಮೂಲ. ಅಪ್ಪ ಕಪನಿಗೌಡ, ಅಮ್ಮ ಎಸ್. ರೇಖಾವತಿ. ಆರ್ಥಿಕ ಪರಿಸ್ಥಿತಿ ಅಷ್ಟಕ್ಕಷ್ಟೇ ಇದ್ದಿದ್ದರಿಂದ, ಅಪ್ಪ–ಅಮ್ಮ ನಾನು ಚಿಕ್ಕವನಿರುವಾಗಲೇ ಬೆಂಗಳೂರಿಗೆ ಬಂದರು. ಅಪ್ಪ ಆಟೊ ಓಡಿಸುತ್ತಿದ್ದರು. ಪ್ರಾಥಮಿಕ ಶಾಲೆಯಲ್ಲೇ ಕೊಕ್ಕೊ ಪ್ರೀತಿ ನನ್ನಲ್ಲಿ ಹುಟ್ಟಿತ್ತು.

ಚಾಮರಾಜಪೇಟೆಯ ಶ್ರೀರಾಮ ಶಿಶುವಿಹಾರ ಸರ್ಕಾರಿ ಶಾಲೆಯಲ್ಲಿ ನಾಲ್ಕನೇ ತರಗತಿ ಓದುತ್ತಿದ್ದೆ. ಮಾರ್ಚ್ ತಿಂಗಳ ಒಂದು ದಿನ ನಮ್ಮ ಶಾಲೆಯಲ್ಲಿ ಕೊಕ್ಕೊ ತಂಡಕ್ಕೆ ಆಯ್ಕೆ ಮಾಡಿಕೊಳ್ಳುತ್ತಿದ್ದರು. ನಾನು ಚುರುಕಾಗಿ ಓಡುತ್ತಿದ್ದರಿಂದ ನನ್ನನ್ನು ಓಡಿಸಿ ತಂಡಕ್ಕೆ ಸೇರಿಸಿಕೊಂಡರು. 5ನೇ ತರಗತಿ ಆರಂಭದಿಂದಲೇ ನನ್ನ ಕೊಕ್ಕೊ ಪಯಣವೂ ಆರಂಭವಾಯಿತು.

ಚಾಮರಾಜಪೇಟೆಯ ನಮ್ಮ ಸುತ್ತಲಿನ ಬಡಾವಣೆಯ ಹುಡುಗರು ಒಟ್ಟಾಗಿ ಕೊಕ್ಕೊ ಆಡಲು ಶುರುಮಾಡಿದೆವು. 'ಮಕ್ಕಳ ಕೂಟ'ದಲ್ಲಿ ಪಂದ್ಯಗಳನ್ನು ಏರ್ಪಡಿಸುತ್ತಿದ್ದರು. ಸ್ನೇಹಿತರೇ ಪರಸ್ಪರ ಆಡುತ್ತಿದ್ದೆವು. ನಮ್ಮ ಶಾಲೆಯ ತಂಡ ನಿರಂತರ ಮೂರು ವರ್ಷ ರಾಜ್ಯಮಟ್ಟಕ್ಕೆ ಆಯ್ಕೆ ಆಯಿತು. 7ನೇ ತರಗತಿಯಲ್ಲಿ ಇದ್ದಾಗ ರಾಷ್ಟ್ರೀಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಬೇಕಿತ್ತು, ಸ್ವಲ್ಪದರಲ್ಲಿ ವಿಫಲರಾದೆವು. ಆ ವರ್ಷ ರಾಜ್ಯಮಟ್ಟದ ಕ್ರೀಡಾಕೂಟ ತುಮಕೂರಿನಲ್ಲಿ ನಡೆದಿತ್ತು. ಸೆಮಿಫೈನಲ್‌ನಲ್ಲಿ ಚಿತ್ರದುರ್ಗದ ತಂಡವನ್ನು ನಾನೊಬ್ಬನೇ ಸುಮಾರು ನಾಲ್ಕೈದು ನಿಮಿಷ ಆಡಿಸಿದ್ದೆ. ಅದನ್ನು ನೋಡಿದ ಮಾದೇವ್ ಸರ್, ಗಾಂಧಿನಗರದ ಕುಮಾರ್ ಎಂಬ ಕೋಚ್ ಪರಿಚಯಿಸಿದರು. ಅದು ಸ್ಪೋರ್ಟ್ಸ್ ಕ್ಲಬ್‌ಗೆ ಆಡಲು ಅವಕಾಶ ಮಾಡಿಕೊಟ್ಟಿತು.

ಕೊಕ್ಕೊ ನನ್ನ ಪ್ಯಾಶನ್, 2012ರಲ್ಲಿ ಸಬ್ ಜೂನಿಯರ್ ರಾಷ್ಟ್ರೀಯ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದೆ. ಆನಂತರ ಕೊಕ್ಕೊ ಆಡುವುದೇ ನನ್ನ ಸರ್ವಸ್ವವೂ ಆಯಿತು. ಅಂತರಶಾಲೆ ಸ್ಪರ್ಧೆಯ ಹೊರತಾಗಿ ನ್ಯಾಷನಲ್ ಸೀನಿಯರ್ಸ್, ಔಟ್ ಜೋನ್, ಫೆಡರೇಷನ್, ನ್ಯಾಷನಲ್ ಗೇಮ್ ಎಂದು ಸುಮಾರು 25 ಪಂದ್ಯಗಳಲ್ಲಿ ಆಡಿದ್ದೇನೆ. ಸಬ್ ಜೂನಿಯರ್‌ನಲ್ಲಿ ಮೊದಲ ಚಿನ್ನದ ಪದಕ ಗೆದ್ದೆವು. ನಂತರ ಚಿನ್ನ, ಬೆಳ್ಳಿ, ಕಂಚಿನ ಸರಣಿ ಪದಕಗಳನ್ನು ನಮ್ಮ ತಂಡ ಪಡೆದಿದೆ. ಸ್ಪೋರ್ಟ್ಸ್ ಕೋಟಾದ ಅಡಿಯಲ್ಲೇ ನಾನೀಗ ಕೆಲಸವನ್ನೂ ಪಡೆದಿದ್ದೇನೆ.

ಆಟದಿಂದ ಓದಿಗೆ ತೊಂದರೆ ಅನ್ನಿಸಲಿಲ್ಲ. ಶಾಲೆಯ ಪಾಠ ಪ್ರವಚನವನ್ನು ನನ್ನ ಪಾಡಿಗೆ ನಾನು ಓದುತ್ತಿದ್ದೆ. ಓದಿನಲ್ಲೂ ಸ್ಪರ್ಧೆ ಒಡ್ಡುವ ಮನಸ್ಸು ಇತ್ತು. ಪ್ರಥಮ ದರ್ಜೆಯಲ್ಲೇ ಪಾಸಾಗಿದ್ದೇನೆ. ಬಿಕಾಂ ಓದುತ್ತಾ ಇದನ್ನು ಫುಲ್ ಟೈಮ್ ತೆಗೆದುಕೊಳ್ಳಬೇಕಾಯಿತು. ಬಿಕಾಂನಲ್ಲಿದ್ದಾಗ ನಿತ್ಯ ಮೂರು ಬಾರಿ ಪ್ರಾಕ್ಟೀಸ್ ಮಾಡುತ್ತಿದ್ದೆ. ಅಂತರ ಕಾಲೇಜು, ವಿಶ್ವವಿದ್ಯಾಲಯಗಳ ತಂಡಗಳ ವಿರುದ್ಧ ನಿಯಮಿತವಾಗಿ ಆಡುತ್ತಿದ್ದೆ. ಡಿಗ್ರಿ ಅಂತಿಮ ವರ್ಷದಲ್ಲಿದ್ದಾಗ ರಾಷ್ಟ್ರೀಯ ಟೆಸ್ಟ್ ಮ್ಯಾಚ್‌ಗೆ ಆಯ್ಕೆಯಾದೆ. ನಂತರ ರಾಷ್ಟ್ರೀಯ ಏಷ್ಯನ್ ಚಾಂಪಿಯನ್‌ಶಿಪ್ ಆಡಿ, ಅದರಲ್ಲಿ ಎರಡು ಚಿನ್ನದ ಪದಕ ಗೆದ್ದಿದ್ದೆವು. ಈ ವರ್ಷದ ವಿಶ್ವಕಪ್ ಟೂರ್ನಮೆಂಟ್‌ನಲ್ಲಿ ಗೆದ್ದಿದ್ದು ಅತೀವ ಸಂತಸ ಉಂಟು ಮಾಡಿದೆ.

> ಸೀನಿಯರ್ ನ್ಯಾಷನಲ್ ಸ್ಪರ್ಧೆಯಲ್ಲಿ ಬೆಸ್ಟ್ ಪ್ಲೇಯರ್ ಆಯ್ಕೆ ಮಾಡಿಕೊಳ್ಳುತ್ತಾರೆ. ಇಂಡಿಯಾ ತಂಡಕ್ಕೆ ನನ್ನ ಆಟದ ಪರ್ಫಾರ್ಮೆನ್ಸ್ ಮೇಲೆ ಆಯ್ಕೆ ಮಾಡಿದ್ದರು. ರಾಜ್ಯದಿಂದ ಪುರುಷರ ತಂಡಕ್ಕೆ ನಾನೊಬ್ಬನೇ ಆಯ್ಕೆಯಾಗಿದ್ದೆ. ಈ ಆಟದಲ್ಲಿ ಮಹಾರಾಷ್ಟ್ರ ಮುಂಚೂಣಿಯಲ್ಲಿದೆ. ಆ ಮಟ್ಟಕ್ಕೆ ಕರ್ನಾಟಕದಲ್ಲಿ ಕೊಕ್ಕೊ ಬೆಳೆಸಬೇಕು ಎನ್ನುವುದು ನನ್ನ ಗುರಿ.
>
> **-ಎಂ.ಕೆ. ಗೌತಮ್,**
> **ವಿಶ್ವಕಪ್ ಕೊಕ್ಕೊ ಆಟಗಾರ**

ಮುಂದೆ ಒಲಿಪಿಂಕ್ಸ್ ಕ್ರೀಡಾಕೂಟದಲ್ಲಿ ಕೊಕ್ಕೊ ಕೂಡ ಸೇರುವ ಸಾಧ್ಯತೆ ಇದೆ. ಆ ನಿಟ್ಟಿನಲ್ಲಿ ಕೊಕ್ಕೊ ಫೆಡರೇಷನ್ ಆಫ್ ಇಂಡಿಯಾ ಪ್ರಯತ್ನ ಮಾಡುತ್ತಿದೆ. ಈಗ ಸೌತ್ ಏಷ್ಯನ್ ಗೇಮ್‌ನಲ್ಲಿ ಇದೂ ಒಂದಾಗಿದೆ. ಯಂಗ್ ಪಯೊನಿಯರ್ಸ್ ಸ್ಪೋರ್ಟ್ಸ್ ಕ್ಲಬ್ ಮೂಲಕ ನಾನು ಬೆಳೆದಿದ್ದೇನೆ. ಮುಂದೆ ನಾನು ಕೊಕ್ಕೊ ಆಸಕ್ತ ಮಕ್ಕಳನ್ನು ಬೆಳೆಸಬೇಕು. ಅದು ಹೆಚ್ಚಿನ ಹಣವನ್ನು ಬಯಸುವ ಆಟ ಅಲ್ಲ. ಸ್ವಯಂ ಆಸಕ್ತಿ ಇದ್ದರೆ ಸಾಕು. ನಾವು ಮಕ್ಕಳಿಂದ ದುಡ್ಡು ತೆಗೆದುಕೊಳ್ಳದೆ ಕಲಿಸುವ ಯತ್ನ ಮಾಡುತ್ತಿದ್ದೇವೆ. ಆದರೆ, ಕೆಲ ಪೋಷಕರು ಫ್ರೀಯಾಗಿ ಏನು ಕಲಿಸುತ್ತಾರೆ ಎಂದು ಅಚ್ಚರಿ ವ್ಯಕ್ತಪಡಿಸುತ್ತಾರೆ. ಕಬ್ಬಡ್ಡಿ ಮತ್ತು ಕೊಕ್ಕೊ ಕಲಿಯಲು ಬೇಕಿರುವುದು ಮನಸೇ ಹೊರತು ದುಡ್ಡಲ್ಲ.

ನಮ್ಮ ದೇಸಿ ಕ್ರೀಡೆ ಎನ್ನಬಹುದಾದ ಕೊಕ್ಕೊಗೆ ಸರ್ಕಾರ ಬೆಂಬಲ ನೀಡಬೇಕು. ಉತ್ತಮ ಹಾಸ್ಟೆಲ್ ತೆರೆಯಬೇಕು. ಅತ್ಯುತ್ತಮ ತರಬೇತಿ ಕೇಂದ್ರವನ್ನು ತೆರೆಯಬೇಕು. ಪ್ರೋತ್ಸಾಹ ನೀಡಬೇಕು. ಈ ಕ್ರೀಡೆಯಲ್ಲಿ ಸಾಧನೆ ಮಾಡಿದವರಿಗೆ ಸೂಕ್ತ ಗೌರವ ದೊರೆಯಬೇಕು. ಆಗ ಇನ್ನಷ್ಟು ಸಾಧನೆಗೆ ಪ್ರೇರಣೆ ಸಿಗುತ್ತದೆ. ■

ಎಂದು ಸಂಭ್ರಮದ ಕಾರ್ಯಕ್ರಮ ನಡೆದದ್ದು ಅಪಾರ ಸಂತೋಷವನ್ನು ನನಗೆ ಕೊಟ್ಟಿದೆ.

ಮೈಸೂರು ಜಿಲ್ಲೆಯ ತಿ. ನರಸೀಪುರ ತಾಲ್ಲೂಕಿನ ಕುರುಬೂರು ನಮ್ಮೂರು. ಸಾಮಾನ್ಯ ರೈತಕುಟುಂಬ ನಮ್ಮದು. ಅಪ್ಪ ಬಸವಣ್ಣ ಗದ್ದೆಯಲ್ಲಿ ಕೆಲಸ ಮಾಡುತ್ತಾರೆ. ಅಮ್ಮ ನಾಗರತ್ನಾ ಗೃಹಿಣಿ. ನಮ್ಮ ತಂದೆಗೆ ಗದ್ದೆಯಲ್ಲಿ ಕಾಲಿಗೆ ಮುಳ್ಳು ಚುಚ್ಚಿದ್ದು ಅವರ ಆರೋಗ್ಯದಲ್ಲಿ ತುಂಬ ತೊಂದರೆಯನ್ನು ಉಂಟುಮಾಡಿತು. ಈಗ ಆರಾಮವಾಗಿದ್ದಾರೆ. ಮುಂದೆ ಒಳ್ಳೆಯ ಉದ್ಯೋಗಕ್ಕೆ ಸೇರಬೇಕು, ಅವರನ್ನು ಸುಖವಾಗಿ ನೋಡಿಕೊಳ್ಳಬೇಕು ಎನ್ನುವುದು ನನ್ನ ಆಸೆ.

ನಾನು ದೈಹಿಕ ಶಿಕ್ಷಣದಲ್ಲಿ (ಬಿಪಿಇಡಿ) ಎರಡನೇ ವರ್ಷದ ಪದವಿಯನ್ನು ಓದುತ್ತಿದ್ದೇನೆ. ನನಗೆ ಕೊಕ್ಕೊ ಮೇಲೆ ಪ್ರೀತಿ ಹುಟ್ಟಲು ಅಣ್ಣ ಚೇತನ್ ಮೂಲ ಕಾರಣ. ನಾನಾಗ 4ನೇ ತರಗತಿ ಓದುತ್ತಿದ್ದೆ. ನಮ್ಮ ಸೀನಿಯರ್ಸ್ ಜೊತೆ ಅಣ್ಣ ಆಡುತ್ತಿದ್ದುದನ್ನು ನೋಡುತ್ತಿದ್ದೆ. ನಾನೂ ಕೊಕ್ಕೊ ಆಡಲು ಶುರು ಮಾಡಿದೆ. ಈ ನನ್ನ ಆಸೆಗೆ ಬೆನ್ನೆಲುಬಾಗಿ ನಿಂತವರು ನಮ್ಮ ಮಂಜುನಾಥ್ ಮೇಷ್ಟ್ರು. ಅವರು ನಮಗೆ ಗಣಿತ ಮತ್ತು ಸಮಾಜ ವಿಜ್ಞಾನ ಪಾಠ ಮಾಡುತ್ತಿದ್ದರು. ಈಗಲೂ ನನಗೆ ಎಲ್ಲ ರೀತಿಯ ಮಾರ್ಗದರ್ಶನ ಮತ್ತು ತರಬೇತಿಯನ್ನು ಕೊಡುತ್ತಿದ್ದಾರೆ. ಹೈಸ್ಕೂಲ್, ಪಿಯುಸಿ ಓದುವಾಗ ಕೂಡ ಆಟ ಪಾಠ ಎರಡನ್ನೂ ಸಮತೋಲನಗೊಳಿಸಿ ನನ್ನನ್ನು ಬೆಳೆಸಿದ್ದು ಮಂಜು ಸರ್.

ಪ್ರಾಥಮಿಕ ಶಾಲೆಯಲ್ಲೇ ಆಡಲು ಶುರುಮಾಡಿದ ನನಗೆ ಅಂತರ ಶಾಲೆಯಲ್ಲಿ ಆಡುವುದೇ ಖುಷಿಯನ್ನು ಉಂಟುಮಾಡುತ್ತಿತ್ತು. ಆಟದ ಮೇಲಿದ್ದ ನನ್ನ ಆ ಆಸಕ್ತಿ ಶೈಕ್ಷಣಿಕ ಜೀವನದ ಬದುಕನ್ನೇ ಬದಲಿಸಿತು. ನಿರಂತರ ಕ್ರೀಡಾಂಗಣದಲ್ಲಿ ಓಡುವುದನ್ನೇ ಮಾಡುತ್ತಿದ್ದೇನೆ.

'ಖೇಲೋ ಇಂಡಿಯಾ', 'ನ್ಯಾಷನಲ್ ಗೇಮ್ಸ್', 'ಸಬ್ ಜೂನಿಯರ್ ನ್ಯಾಷನಲ್' ಸೇರಿದಂತೆ ವಿಶ್ವವಿದ್ಯಾಲಯ, ಅಂತರ ಶಾಲೆ–ಕಾಲೇಜು ಪಂದ್ಯಗಳನ್ನು ಆಡುತ್ತಲೇ ಬಂದಿದ್ದೇನೆ. ಈಗ ರಾಷ್ಟ್ರೀಯ ತಂಡದಲ್ಲಿ ಆಡುತ್ತಿದ್ದೇನೆ. ಕರ್ನಾಟಕವನ್ನು ಪ್ರತಿನಿಧಿಸಿ 30ಕ್ಕೂ ಅಧಿಕ ಪಂದ್ಯಗಳಲ್ಲಿ ಆಡಿದ್ದೇನೆ. ಅದರಲ್ಲಿ 11 ಚಿನ್ನದ ಪದಕವನ್ನು ಪಡೆದಿದ್ದೇನೆ.

ಪ್ರತಿಕ್ರಿಯಿಸಿ: feedback@sudha.co.in